ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\284\2017\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:07/08/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ.ಕೆ.ಎಸ್.ಯಲ್ಲಪ್ಪ ಬಿನ್ ಸಂಗಪ್ಪ, ರೈತ ಮುಖಂಡರು, ಡಿಬಿ ಹಳ್ಳಿ. ಕಲ್ಲಿಹಾಳ ಅಂಚೆ, ಭದ್ರಾವತಿ ತಾಲ್ಲೂಕ್, ಶಿವಮೊಗ್ಗ ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಶಿವಮೊಗ್ಗ ಜಿಲ್ಲೆ ಭದ್ರಾವತಿ ತಾಲ್ಲೂಕ್ ಕಲ್ಲಿಹಾಳ ಅಂಚೆ ಡಿಬಿ ಹಳ್ಳಿ ರೈತ ಮುಖಂಡರಾದ ಶ್ರೀ.ಕೆ.ಎಸ್.ಯಲ್ಲಪ್ಪ ಬಿನ್ ಸಂಗಪ್ಪ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲ್ಲೂಕ್ ಕಛೇರಿ ತಹಶೀಲ್ದಾರ [ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಶಿಕಾರಿಪುರ ತಾಲ್ಲೂಕ್ ಅಂಜನಾಪುರ ಹೋಬಳಿ ಸನ್ಯಾಸಕೊಪ್ಪ ಗ್ರಾಮದ ಸರ್ವೆ ನಂ.3ರ 2 ಎಕರೆ 20 ಗುಂಟೆ ಜಮೀನನ್ನು ಹದ್ದುಬಸ್ತು ಮಾಡಲು ದಿ:26/06/15ರಂದು ಎದುರುದಾರರಿಗೆ ಅರ್ಜಿ ಸಲ್ಲಿಸಿ, ಹದ್ದುಬಸ್ತು ಶುಲ್ಕವನ್ನು ಸಹ ಪಾವತಿಸಿದರೂ ಎದುರುದಾರರು ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-

ಸದರಿ ಜಮೀನು ಸರ್ಕಾರಿ ಸರ್ವೆ ನಂಬರಾಗಿದ್ದು, ಸರ್ಕಾರಿ ಸರ್ವೆ ನಂಬರಿನಲ್ಲಿ ಹದ್ದುಬಸ್ತು ಅಳತೆ ಮಾಡಲು ಅವಕಾಶವಿಲ್ಲ ಹಾಗೂ ಮೋಜಣಿ ತಂತ್ರಾಂಶದಲ್ಲೂ ಸಹ ಸರ್ಕಾರಿ

ಸರ್ವೆ ನಂಬರ್ ಆಗಿದ್ದಲ್ಲಿ, ಹದ್ದುಬಸ್ತು ಅಳತೆಗೆ ಅರ್ಜಿ ಸ್ವೀಕೃತವಾಗುವುದಿಲ್ಲ. ಆದರೆ, ಸರ್ವೆ ನಂ.3ಪಿ ಇದ್ದು, ಏಕ ವ್ಯಕ್ತಿಯೆಂದು ಹಂಚಿಕೆಯಾಗಿದೆ. ಇಂಥಹ ಪ್ರಕರಣಗಳಲ್ಲಿ ಸರ್ಕಾರದ ಸುತ್ತೋಲೆಯಂತೆ ಎಲ್ಲಾ ಪಹಣಿಗಳನ್ನು ಒಟ್ಟುಗೂಡಿಸಿ, ಪಹಣಿ ಕಾಲಂ 3 ಮತ್ತು 9ರಲ್ಲಿ ವಿಸ್ತೀರ್ಣವನ್ನು ಆಕಾರ್‌ಬಂದ್ ವಿಸ್ತೀರ್ಣಕ್ಕೆ ತಾಳೇ ಮಾಡಿ, ಮೂಲ ಮಂಜೂರು ಕಡತದೊಂದಿಗೆ ಏಕ ವ್ಯಕ್ತಿ ಆದೇಶವಾದಲ್ಲಿ, ಧರಖಾಸ್ತು ರೀತಿ ಪೋಡಿ ಮಾಡಬಹುದಾಗಿದ್ದು, ಸದರಿ ಸರ್ವೆ ನಂಬರಿನಲ್ಲಿ ಅನೇಕ ಪಹಣಿ ಪ್ರತಿಗಳಿದ್ದು, ಪಹಣಿ ತಿದ್ದುಪಡಿಗೆ ಕಾಲಾವಕಾಶ ಬೇಕಾಗಿದೆ. ಸದರಿ ಸರ್ವೆ ನಂಬರಿಗೆ ಸಂಬಂಧಪಟ್ಟಂತೆ 102.9 ಎಕರೆ ಜಮೀನಿದ್ದು, ಈ ಪೈಕಿ 76.4 ಎಕರೆ ಜಮೀನು 35 ಜನರಿಗೆ ಧರಖಾಸ್ತು ಮೂಲಕ ಮಂಜೂರಾಗಿದೆ. ಸದರಿ ಜಮೀನಿಗೆ ಸಂಬಂಧಪಟ್ಟಂತೆ, ನಮೂನೆ–1 ರಿಂದ 5ನ್ನು ಭರ್ತಿ ಮಾಡಿ, ಪಹಣಿಯ ಕಾಲಂ 3 ಮತ್ತು 9ರಲ್ಲಿ ವ್ಯತ್ಯಾಸ ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ ಹಾಗೂ ಎಲ್ಲಾ ಪಹಣಿಗಳನ್ನು ಒಟ್ಟುಗೂಡಿಸಿದ ನಂತರ ಏಕ ವ್ಯಕ್ತಿ ಪ್ರಕರಣದಡಿ ಪೋಡಿ ದುರಸ್ತಿ ಮಾಡಿದ ನಂತರ ಹದ್ದುಬಸ್ತು ಕಾರ್ಯ ಕೈಗೊಳ್ಳಬೇಕಾದ್ದರಿಂದ, ಆಧ್ಯತೆ ಮೇರೆಗೆ ಕ್ರಮ ಜರುಗಿಸಬಹುದಾಗಿದೆಯೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಎದುರುದಾರರ ಆಕ್ಷೇಪಣೆಯನ್ನು ಅಲ್ಲಗಳೆದಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಸನ್ಯಾಸಕೊಪ್ಪ ಗ್ರಾಮದ ಸರ್ವೆ ನಂ.3ರಲ್ಲಿ ಒಟ್ಟು 102.9 ಎಕರೆ ಜಮೀನಿದ್ದು, ಅದರಲ್ಲಿ 76.4 ಎಕರೆ ಜಮೀನು ಸುಮಾರು 35 ಜನರಿಗೆ ಧರಖಾಸ್ತು ಮೂಲಕ ಮಂಜೂರಾಗಿದೆ. ಅದರಂತೆ, ದೂರುದಾರರ ಕುಟುಂಬಕ್ಕೂ ಸಹ ಸದರಿ ಸರ್ವೆ ನಂಬರಿನಲ್ಲಿ 2 ಎಕರೆ 20 ಗುಂಟೆ ಜಮೀನು ಮಂಜೂರಾಗಿದ್ದು, ಎಲ್ಲಾ ದಾಖಲೆಗಳು ಸಹ ದೂರುದಾರರ ಕುಟುಂಬದವರ ಹೆಸರಿನಲ್ಲಿದೆ. ಸದರಿ ಜಮೀನಿಗೆ ಸಂಬಂಧಪಟ್ಟಂತೆ ಹದ್ದುಬಸ್ತು ಗುರುತಿಸಲು ದಿ:26/06/15ರಂದು ಎದುರುದಾರರ ಕಛೇರಿಗೆ ಅರ್ಜಿ ಸಲ್ಲಿಸಿದ್ದು, ಈ ಬಗ್ಗೆ ನಿಗದಿತ ಅಳತೆ ಶುಲ್ಕವನ್ನು ಸಹ ಪಾವತಿಸಿದ್ದಾರೆ. ಆದರೆ, ಸದರಿ ಜಮೀನಿನಲ್ಲಿ ಸುಮಾರು 35 ಜನರಿಗೆ ಹಂಚಿಕೆಯಾಗಿರುವುದರಿಂದ, ಎಲ್ಲಾ ಪಹಣಿ ಪತ್ರಿಕೆಗಳನ್ನು ಒಟ್ಟುಗೂಡಿಸಿ, ಏಕವ್ಯಕ್ತಿ ಪ್ರಕರಣದಲ್ಲಿ ಪೋಡಿ ದುರಸ್ತಿ ಮಾಡಿ, ಹದ್ದುಬಸ್ತು ಕಾರ್ಯ ಕೈಗೊಳ್ಳಬೇಕಾದ್ದರಿಂದ, ಎದುರುದಾರರು ಆಧ್ಯತೆಯ ಮೇರೆಗೆ ಹದ್ದುಬಸ್ತು ಕಾರ್ಯ ಕೈಗೊಂಡಿರುವುದು ಕಂಡು ಬಂದಿದೆ.

BD/284/17



6. ಆದ್ದರಿಂದ, ದೂರುದಾರರ ಜಮೀನಿಗೆ ಸಂಬಂಧಪಟ್ಟಂತೆ ತಕ್ಷಣ ಕ್ರಮ ಕೈಗೊಂಡು ಹದ್ದುಬಸ್ತು ಗುರುತಿಸಿ ಕೊಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 10/8/17.

(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.